ಇಂದು ದಿನಾಂಕಃ 22.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಪ್ರತಿವಾದಿಯ ಪರ ಶ್ರೀ ಬಿ.ಎನ್.ಸಿ ವಕೀಲರಿಂದಃ

1. ಈ ಹಿಂದೆ ಪ್ರತಿವಾದಿ 1 ಮತ್ತು 2 ರವರು ನನ್ನತಂದೆ ಹಾಗೂ ಪಂಚಾಯತಿ ಅಧಿಕಾರಿಗಳ ವಿರುದ್ದ ಅಸಲು ದಾವಾ ನಂಬರ್ಃ 60/2005 ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ನನ್ನ ತಂದೆ ಹಾಜರಾಗಿದ್ದರು ಎಂದು ಸೂಚಿಸುವುದು ಸರಿ. ಸದರಿ ಪ್ರಕರಣದಲ್ಲಿ ನನ್ನತಂದೆ ಹಾಗೂ ಪಂಚಾಯತಿ ಅಧಿಕಾರಿಗಳು ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ್ದು, ಸದರಿ ವಿಚಾರ ನನಗೆ ತಿಳಿದಿದೆ ಎಂದರೆ ಸರಿ. ಸದರಿ ಪ್ರಕರಣವು ದಿನಾಂಕಃ 13/11/2013 ರಂದು ಮುಕ್ತಾಯಗೊಂಡು ನಾವು ವಾಸವಿರುವ ಮನೆಯನ್ನು ಕೆಡವಿ ಖಾಲಿ ಜಾಗವನ್ನು ಈ ಪ್ರಕರಣದ ಪ್ರತಿವಾದಿಯರಿಗೆ ನೀಡಬೇಕೆಂದು ಡಿಕ್ರಿಯಾಗಿದೆ ಎಂದು ಸೂಚಿಸುವುದು ಸರಿ. ಸಾಕ್ಷಿಯು ಮುಂದುವರೆದು ಪ್ರಸ್ತುತ ದಾವಾ ಆಸ್ತಿಯೇ ಬೇರೆ ಹಾಗೂ ಅಸಲು ದಾವಾ ನಂಬರ್ಃ 60/2005 ರ ದಾವಾ ಆಸ್ತಿಯು ಬೇರೆ-ಬೇರೆ ಇದೆ ಎಂದು ನುಡಿಯುತ್ತಾರೆ.

2. ಅಸಲು ದಾವಾ ನಂಬರ್ಃ 60/2005 ರ ಪ್ರಕರಣದಲ್ಲಿ ಪಂಚಾಯತಿ ಅಧಿಕಾರಿಗಳು ನಮಗೆ ಮಂಜೂರು ಮಾಡಿರುವ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಯಲ್ಲಿ ನಾವು ಕಟ್ಟಡ ನಿರ್ಮಿಸಿದ್ದೇವೆ ಎಂದು ದಾಖಲಾತಿ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ನಂಬರ್ಃ 60/2005 ರ ಡಿಕ್ರಿ ಆಧಾರದ ಮೇಲೆ ಪ್ರತಿವಾದಿಯರು ಅಮಲ್ ಜಾರಿ ಅರ್ಜಿ ನಂಬರ್ಃ 04/2015 ರಂತೆ ಪ್ರಕರಣ ದಾಖಲಿಸಿ, ನನ್ನ ತಂದೆಗೆ ನೋಟೀಸು ಜಾರಿಯಾದ ನಂತರ ನಾವು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಿಂದಿನ ಡಿಕ್ರಿ ಪ್ರಕಾರ ಸ್ವಾಧೀನವನ್ನು ನೀಡದೇ ಈ ಸುಳ್ಳು ದಾವೆಯನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.